"ಬಂಗಾರದ ಸರ ಅವನಿಗೆಲ್ಲೇ ಮಾಡಿಸಿದ್ದೀವಿ. ನಿನಗೇನು ಹುಚ್ಚಾ!"

"ಅಯ್ಯೋ ನನ್ನ ತಾಳಿಸರಾರೀ."

"ನಿನ್ನ ತಾಳಿ ಅವನ್ಯಾಕೆ ಹಾಕ್ಕೋತಾನೆ?"

"ಬ್ಯಾಡಾಂದ್ರೂ ಅವನೆಲ್ಲಿ ಬಿಡ್ತಾನೆ, ಬೆಳಗ್ಗೆ ಹಾಕ್ಕೊಂಡಿದ್ದ. ನಿಮ್ಮ ಜೊತೆ ಹೋಗುವಾಗ ಅವನ ಕೊರಳಲ್ಲಿ ಇತ್ತು. ಈಗ ಕಾಣ್ತಾ ಇಲ್ಲ" ಎಂದು ಕೊಂಚ ನೋವಲ್ಲೇ ಕೂಗಿಕೊಂಡಳು.

"ಎಲ್ಲೋ ನೀನೆ ಎತ್ತಿಟ್ಟಿರ್ತೀಯಾ, ಸರಿಯಾಗಿ ನೋಡು. ನಾ ಕಂಡಂಗೆ ಅವನ ಕೊರಳಲ್ಲಿ ಅದೇನು ಕಾಣ್ಲಿಲ್ಲ."

"ನೀವು ಮೊದ್ಲು ಹೊರಗೆ ಬನ್ನಿ" ಈಗ ಅವಳು ಅಳುತ್ತಿದ್ದಳು.

ಓಹೋ ಇದು ತಾಳಿಭಾಗ್ಯ ಯೋಜನೆಯೇ ಮುಳುಗಡೆಯಾಗಿರುವ ಅಘಾತಕಾರಿ ಸುದ್ದಿ. ಹೇಗೆ, ಎಲ್ಲಿ, ಯಾಕೆ? ಎಂದು ಯೋಚಿಸಲು ನನಗೂ ತೋಚುತ್ತಿಲ್ಲ. ಈ ವಿಷಯವೇ ಭಯಂಕರ ಗೊಂದಲ ಹುಟ್ಟಿಸುತ್ತಿದೆ. ಒಂದಕ್ಕೊಂದು ತಾಳೆಯೂ ಆಗುತ್ತಿಲ್ಲ. ಸ್ನಾನಕ್ಕೆ ಬೆಂಕಿ ಬಿತ್ತು ಎಂದು ಟವೆಲ್ಲು ಸುತ್ತಿಕೊಂಡು ಲಗುಬಗೆಯಿಂದ ಆಚೆ ಬಂದು ನಿಂತೆ. ಇವಳು ತಲೆ ಮೇಲೆ ಕೈ ಹೊತ್ತು ಗೊಳೋ ಎನ್ನುತ್ತಿದ್ದಳು. ಏನೂ ಅರಿಯದ ಮಗ ಪಿಳಿಪಿಳಿ ಕಣ್ಣು ಬಿಡುತ್ತಾ ನನ್ನ ಹತ್ತಿರ ಓಡಿ ಬರತೊಡಗಿದ. ಉಟ್ಟಿದ್ದ ತುಂಡು ಟವೆಲ್ಲನ್ನು ಎಲ್ಲಿ ಆವೇಶದಲ್ಲಿ ಎಳೆದು ಮಾನ ಹರಾಜು ಹಾಕುವನೋ ಎಂದು ಅಂಜಿ, "ಅಲ್ಲೇ ನಿಲ್ಲು'' ಎಂದೆ. ನಾನವನಿಗೆ ಗದರಿಸಿದೆನೆಂದು ತಪ್ಪಾಗಿ ಭಾವಿಸಿ ಅವನೂ ರೋದಿಸತೊಡಗಿದ.

"ಸಮಾಧಾನದಿಂದ ಹೇಳು ಏನಾಯಿತು ಅಂತ. ನೀ ಹೇಳೋದು ನಂಗೊಂದು ತಿಳೀತಿಲ್ಲ" ಎಂದೆ. ಅವಳು ವಿವರ ಹೇಳುವ ಬದಲು ಸತ್ತವರ ಮನೆಯಲ್ಲಿ ಅಬ್ಬರಿಸಿ ಗೋಳಾಡುವ ರೀತಿ ತನ್ನ ಕಾರ್ಯಕ್ರಮ ಮುಂದುವರೆಸಿದಳು. ಲಗುಬಗೆಯಿಂದ ಮೈ ಒರೆಸಿಕೊಂಡು ಮೊದಲು ಬಟ್ಟೆ ಹಾಕಿಕೊಂಡೆ. ಮಳ್ಳನಂತೆ ನಿಂತಿದ್ದ ಮಗನ ಒಮ್ಮೆ ನೋಡಿ, "ಸರ ಎಲ್ಲೋ" ಎಂದೆ. ಮೊದಲೇ ಗೊಂದಲದಲ್ಲಿದ್ದ ಅವನು ಮತ್ತಷ್ಟು ಅಬ್ಬರಿಸಹತ್ತಿದ. "ಮಗೂಗೆ ಯಾಕೆ ಜೋರು ಮಾಡ್ತೀರಾ? ಎಲ್ಲಾ ನಿಮ್ದೆ ತಪ್ಪು" ಎಂದು ನನ್ನ ಆರೋಪಿ ಮಾಡಿದಳು.

ಇವರಿಬ್ಬರೂ ತಮ್ಮ ದರಿದ್ರ ಅಳು ನಿಲ್ಲಿಸಿ ಶಾಂತರಾಗುವ ತನಕ ನನ್ನ ತನಿಖೆ ಮತ್ತು ಮಾತುಕತೆ ಮುಂದುವರೆಸುವಂತೆ ಇರಲಿಲ್ಲ. ಹೊರಗಿದ್ದ ಕೆಲಸದ ಹುಡುಗಿ ಗಲಾಟೆ ಕೇಳಿ ಓಡೋಡಿ ಬಂದಳು. "ಅಕ್ಕನಿಗೂ, ಮಗೂಗೂ ಏನಾಯಿತು, ಅಣ್ಣ" ಎಂದು ವಿಚಾರಿಸಿದಳು. ನಾನು ಮಾತಾಡಲಿಲ್ಲ. ಅವಳ ಗುಮಾನಿ ನಾನು ಹೆಂಡತಿಗೆ ಸರಿಯಾಗಿ ನಾಲ್ಕು ತದುಕಿದ್ದೇನೆ ಎಂಬುದಾಗಿತ್ತು. ಅದಕ್ಕೆ ತಕ್ಕಂತೆ ತಾಯಿ ಮಗ ಇಬ್ಬರೂ ಬೊಂಬಡಾ ಬಜಾಯಿಸುವ ರೇಂಜು ಕೂಡ ಹಾಗೇ ಇತ್ತು.

ಮಗ ಕಬೀರನಿಗೆ ಕೊರಳಲ್ಲಿ ಚೈನು ಹಾಕುವ ಶೋಕಿ ತುಸು ಜಾಸ್ತೀನೆ ಬಂದಿತ್ತು. ಇದಕ್ಕೆ ಕಾರಣ ಅವನು ಅತಿ ಹೆಚ್ಚು ಸಲ ನೋಡಿದ 'ಮುಂಗಾರು ಮಳೆ' ಸಿನಿಮಾ. ಅದರ ಹೀರೊ ಗಣೇಶನಂತೆ ಉಂಗುರ, ಕನ್ನಡಕ ಮತ್ತು ಸರ ಹಾಕಬೇಕೆಂದು ಎಲ್ಲಿ ಹೋದರೂ ಕೇಳುತ್ತಿದ್ದ. ನಮ್ಮಕ್ಕ ಊರಿಂದ ಬಂದರೆ ಅವಳ ಕೊರಳ ತಾಳಿ ಹಟ ಮಾಡಿ ಪಡೆದು ಹಾಕಿಕೊಳ್ಳುತ್ತಿದ್ದ. "ಅಷ್ಟೆಲ್ಲಾ ಬೆಲೆ ಬಾಳುವ ಪದಾರ್ಥ ಕೊಡಬೇಡಕ್ಕ" ಎಂದರೂ "ಮಗೂಗಿಂತ ಅದೇನು ಹೆಚ್ಚಲ್ಲ ಬಿಡು" ಎನ್ನುತ್ತಿದ್ದಳು ಆಕೆ. "ಮೂವತ್ತು ವರ್ಷದಿಂದ ಈ ಗಲ್ಸೇರ್ (ಕಾಸಿನ ತಾಳಿಸರ) ಹಾಕಿ ಬೇಜಾರಾಗಿದೆ ಬಿಡೋ" ಎಂದುಬಿಡೋಳು.

ಹೀಗೆ ಮಗ ಕಲಿತ. ನಾವೆಲ್ಲಾ ಕೂಡಿ ಕಲಿಸಿದ ಈ ಚಟವೇ ಈಗ ಮುಳುವಾಗಿತ್ತು. "ಅವನು ಬೆಳಗ್ಗೆ ಎದ್ದಾಗಲೇ ಬೇಕೂಂತ ಇಸ್ಕೊಂಡು ಹಾಕ್ಕೊಂಡ. ಹೆಂಗೂ ಮನೇಲೆ ಇರ್ತಾನಲ್ಲಾ ಅಂತ ನಾನೇ